**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ43/2015 ಪಿ.ಡಬ್ಲೂಃ 02**

ಸಾಕ್ಷಿಯನ್ನು ಇಂದು ದಿನಾಂಕಃ **05.08.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ **ಬಿ.ಪಿ.ಎಂ** ವಕೀಲರಿಂದಃ

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಅಂಶಗಳು ನನಗೆ ತಿಳಿದಿರುತ್ತವೆ. ಬಸಮ್ಮರವರು ನನಗೆ ಸುಮಾರು 3-4 ವರ್ಷಗಳಿಂದ ಪರಿಚಯ ಇರುತ್ತಾರೆ. ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನನಗೆ ನ್ಯಾಯಾಲಯದಿಂದ ಸಮನ್ಸ ಜಾರಿಯಾಗಿರುತ್ತದೆ.

ವಿಲ್ ನನ್ನು 2006 ರಲ್ಲಿ ಮಾಡಲಾಗಿರುತ್ತದೆ, ಆದರೆ ನನಗೆ ನಿಖರವಾದ ದಿನಾಂಕ ನೆನಪಿರುವುದಿಲ್ಲ. ವಿಲ್ ನನ್ನು ಬಸಮ್ಮರವರು ನಾಗರತ್ನಮ್ಮರವರಿಗೆ ಮಾಡಿಕೊಟ್ಟಿರುತ್ತಾರೆ. ವಿಲ್ ಮಾಡುವ ಸಮಯದಲ್ಲಿ ದಾವಾ ಆಸ್ತಿಯ ಖಾತೆಯು ಬಸಮ್ಮರವರ ಹೆಸರಿನಲ್ಲಿ ಇತ್ತು. ವಿಲ್ ಮಾಡುವ ಸಮಯದಲ್ಲಿ ಬಸಮ್ಮರವರಿಗೆ ಸುಮಾರು 80 ರಿಂದ 90 ವಯಸ್ಸು ಆಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಆ ಸಮಯದಲ್ಲಿ ಬಸಮ್ಮರವರಿಗೆ ನಡೆದಾಡಲು ಆಗುತ್ತಿರಲಿಲ್ಲ ಹಾಗೂ ಕಿವಿ ಕೇಳಿಸುತ್ತಿರಲಿಲ್ಲ ಹಾಗೂ ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಬಸಮ್ಮರವರು ದಾವಾ ಆಸ್ತಿಯನ್ನು ನಾಗರತ್ನರವರ ಹೆಸರಿಗೆ ಯಾವ ಉದ್ದೇಶಕ್ಕಾಗಿ ನೀಡಿರುತ್ತಾರೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ವಿಲ್ ಮಾಡುವ ಸಮಯದಲ್ಲಿ ಬಸಮ್ಮರವರು ಬುದ್ದಿಸ್ವಾಸ್ಥ್ಯ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ವಿಲ್ ಮಾಡಿಕೊಡುವ ಸಮಯದಲ್ಲಿ ಬಸಮ್ಮರವರು ದಾವಾ ಆಸ್ತಿಯ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಪಹಣಿ ಪತ್ರಿಕೆಯಲ್ಲಿ ಇದ್ದ ಕಾರಣ ನಾನು ಮಾಡಿಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಬಸಮ್ಮರವರ ಕೊನೆಗಾಲದಲ್ಲಿ ಅವರ ಸೊಸೆ ರಾಜಮ್ಮರವರು ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.

ನಾನು ನಾಗರತ್ನಮ್ಮರವರಿಗೆ ಅನುಕೂಲವಾಗಲೆಂದು ಈ ದಾವೆಯಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**